# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 28

**ಸ್ವಾಮಿ ನಿತ್ಯಸ್ಥಾನಂದ**

## ಶ್ರೀರಾಮಕೃಷ್ಣರು ಮತ್ತು ಶ್ರೀ ಕೇಶವಚಂದ್ರಸೇನ

ಕೇಶವಚಂದ್ರಸೇನನು ಪರಮಹಂಸರಿಗಾಗಿ ಒಂದು ನೌಕಾ ವಿಹಾರವನ್ನು ಏರ್ಪಡಿಸಿದ್ದಾನೆ. ಸುಮಾರು ಅಪರಾಹ್ನ ನಾಲ್ಕು ಗಂಟೆಯ ಸಮಯಕ್ಕೆ ಗಂಗಾನದಿಯಲ್ಲಿ ಒಂದು ಜಹಜು ಬಂದು ದಕ್ಷಿಣೇಶ್ವರ ಕಾಳಿದೇವಾಲಯದ ಹತ್ತಿರ ಲಂಗರು ಹಾಕಿದೆ. ಒಳಗಡೆ ಕೇಶವಚಂದ್ರಸೇನ ಮತ್ತು ಆತನ ಅನುಯಾಯಿಗಳೆಲ್ಲ ಕುಳಿತಿದ್ದಾರೆ. ಪರಮಹಂಸರನ್ನು ಜಹಜಿನ ಹತ್ತಿರ ಕರೆದುಕೊಂಡು ಹೋಗಲು ಒಂದು ಚಿಕ್ಕ ದೋಣಿ ಸಿದ್ಧವಾಗಿ ನಿಂತಿದೆ. ಅವರು ಆ ದೋಣಿಗೆ ಕಾಲು ಹಾಕುವುದೇ ತಡ, ಬಾಹ್ಯಜ್ಞಾನ ಶೂನ್ಯರಾಗಿ ಸಮಾಧಿಸ್ಥರಾಗಿಬಿಟ್ಟರು. ಭಕ್ತರೆಲ್ಲರೂ ಸೇರಿ ಬಹಳ ಎಚ್ಚರಿಕೆಯಿಂದ ಜಹಜಿನ ಒಳಗೆ ಅವರನ್ನು ಕರೆದುಕೊಂಡು ಹೋದರು. ಪರಮಹಂಸರನ್ನು ನೋಡಲು, ಅವರ ಮಾತನ್ನಾಲಿಸಲು ಜಹಜಿನೊಳಗೆ ಜನರು ಕಿಕ್ಕಿರಿದು ಸೇರಿದ್ದರು. ಎಲ್ಲರ ಗಮನವೂ ಅವರ ಕಡೆಗೇ.



ಪರಮಹಂಸರಿಗೆ ಕ್ರಮೇಣ ಬಾಹ್ಯಜ್ಞಾನ ಉಂಟಾಗುತ್ತಿದೆ. ಗಾಜಿಪುರದಲ್ಲಿ ಪವಹಾರಿ ಬಾಬರನ್ನು ಭೇಟಿಯಾಗಿ ಬಂದ ಭಕ್ತನೊಬ್ಬನು ಅವರ ಬಗ್ಗೆ ಪರಮಹಂಸರಿಗೆ ಹೇಳಿದ: ‘‘ಮಹಾಶಯರೆ, ಪವಹಾರಿಬಾಬಾರು ತಮ್ಮ ಕೊಠಡಿಯಲ್ಲಿ ನಿಮ್ಮ ಫೋಟೋ ಇಟ್ಟುಕೊಂಡಿದ್ದಾರೆ.’’ ಪರಮಹಂಸರು ತಮ್ಮ ಶರೀರದ ಕಡೆ ಬೆರಳು ಮಾಡಿ ಕಿಂಚಿತ್ ನಗುತ್ತ ಹೇಳುತ್ತಿದ್ದಾರೆ. ‘‘ಇದು ಕೇವಲ ದಿಂಬಿನ ಚೀಲ ಮಾತ್ರ.’’ ಎಂಥ ನಿರ್ಲಿಪ್ತತೆ! ಬೇರೆಯವರಾಗಿದ್ದರೆ ಆ ಮಾತಿನಿಂದ ಉಬ್ಬಿ ಹೋಗುತ್ತಿದ್ದರು. ಆ ಫೋಟೋ ಈ ದೇಹಕ್ಕೆ ಸಂಬಂಧಪಟ್ಟದ್ದು, ತಮಗಲ್ಲ ಎಂದು ಶ್ರೀರಾಮಕೃಷ್ಣರು ಸೂಚಿಸುತ್ತಿರಬಹುದು. ಅದು ಯಾವುದೋ ವಸ್ತುವಿನ ಚಿತ್ರವಿದ್ದಂತೆ. ಯಾರದೋ ಫೋಟೋವನ್ನು ತೋರಿಸಿ ಇದು ನನ್ನ ಭಾವಚಿತ್ರ ಎಂದು ಹೆಮ್ಮೆಪಟ್ಟರೆ ಎಷ್ಟು ಹಾಸ್ಯಾಸ್ಪದವಲ್ಲವೆ!



ಈ ದೇಹವು ದಿಂಬಿನ ಚೀಲವಿದ್ದಂತೆ. ಚೀಲದ ಬಣ್ಣ ಬೇರೆ ಬೇರೆ ಆಗಿರುತ್ತದೆ, ಆದರೆ ಅದರ ಒಳಗಿರುವ ಹತ್ತಿ ಮಾತ್ರ ಒಂದೇ. ಹಾಗೆಯೇ ದೇಹ ಬಣ್ಣ ಆಕೃತಿಗಳಲ್ಲಿ ಬೇರೆ ಬೇರೆಯಾಗಿದ್ದರೂ ಒಳಗಿರುವ ಆತ್ಮ ಒಂದೇ, ಅದರಲ್ಲಿ ವ್ಯತ್ಯಾಸವಿಲ್ಲ. ಒಳಗೆ ಹತ್ತಿ ಇಲ್ಲದಿದ್ದರೆ ಬರಿಯ ಚೀಲಕ್ಕೆ ಯಾವ ಬೆಲೆಯೂ ಇಲ್ಲ. ಹಾಗೆಯೆ ಆತ್ಮನ ಅಸ್ತಿತ್ವದಿಂದಾಗಿಯೇ ಹೊರಗಿನ ವ್ಯಕ್ತಿತ್ವಕ್ಕೆ ಬೆಲೆ. ಆದ್ದರಿಂದಲೇ ಬೃಹದಾರಣ್ಯಕೋಪನಿಷತ್ತಿನಲ್ಲಿ, **ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ**, ‘ಆತ್ಮನ ಸಲುವಾಗಿಯೇ ಎಲ್ಲವೂ ಪ್ರಿಯವಾಗುವುದು’’ ಎಂದು ಹೇಳಿರುವುದು. ಆದರೆ ನಮ್ಮ ಪ್ರವೃತ್ತಿ ಹೊರ ಕವಚಕ್ಕೇ ಹೆಚ್ಚು ಬೆಲೆಯನ್ನು ಕೊಡುವುದು, ಅದಕ್ಕೇ ಹೆಚ್ಚು ಆಕರ್ಷಿತರಾಗುವುದು. ಒಳಗಿರುವುದರಿಂದಲೇ ಹೊರಗಿರುವುದಕ್ಕೆ ಬೆಲೆ ಎಂಬುದನ್ನು ಮರೆತುಬಿಡುತ್ತೇವೆ. ಅದರಿಂದಲೇ ಮಾರಾಟ ಮೌಲ್ಯವೇ (sale value) ನಿಜವಾದ ಮೌಲ್ಯವನ್ನು(real value) ಮೀರಿಸುತ್ತದೆ. ಒಂದು ಪುಸ್ತಕದ ಒಳಗಿನ

ವಿಷಯ ಅಮುಖ್ಯವಾಗಿದ್ದರೂ ಅದರ ಮುಖಪುಟ ತುಂಬ ಆಕರ್ಷಕವಾಗಿದ್ದರೆ, ಆದರೆ ಹೆಸರು ತುಂಬ ಗಮನ ಸೆಳೆಯುವಂತಿದ್ದರೆ, ಅದು ಚೆನ್ನಾಗಿ ಮಾರಾಟವಾಗಿಬಿಡುತ್ತದೆ. ಇದು ಬೇರೆ ವಸ್ತುಗಳಿಗೂ ಅನ್ವಯವಾಗುತ್ತದೆ. ಒಬ್ಬ ವಾಗ್ಮಿಯು ಅತ್ಯಂತ ಸಾಮಾನ್ಯ ವಿಷಯವನ್ನೇ ಆದರೂ ತುಂಬ ಆಕರ್ಷಕವಾಗಿ ಹೇಳಿದರೆ, ವಾಗ್ವೈಖರಿಯಿಂದ ಹೇಳಿದರೆ, ಜನರು ಮುತ್ತಿಕೊಂಡು ಕೇಳುತ್ತಾರೆ.

ಶ್ರೀರಾಮಕೃಷ್ಣರು ವ್ಯಕ್ತಿತ್ವವನ್ನು ವಿವರಿಸುವಾಗ, ಇನ್ನೊಂದು ಸಂದರ್ಭದಲ್ಲಿ ಕಡುಬಿನ ಉದಾಹರಣೆಯನ್ನು ಕೊಡುತ್ತಾರೆ. ಕಡುಬಿನ ಹೊರಕವಚ ಒಂದೇ ಆಗಿರುತ್ತದೆ, ಆದರೆ ಒಳಗಿನ ಹೂರಣ ಬೇರೆ ಬೇರೆಯಾಗಿರುತ್ತದೆ. ಹಾಗೆಯೇ ಎಲ್ಲ ವ್ಯಕ್ತಿಗಳಿಗೂ ಒಂದೇ ಆಗಿ ಕಂಡರೂ – ಎಲ್ಲರೂ ಮನುಷ್ಯಾಕೃತಿಯವರೇ – ಒಳಗಡೆ ಒಬ್ಬೊಬ್ಬರೂ ಬೇರೆಬೇರೆಯಾಗಿರುತ್ತಾರೆ. ಇಲ್ಲಿ ವೈವಿಧ್ಯತೆ ಕಂಡುಬರುವುದು ಅವರವರ ಸ್ವಭಾವದಲ್ಲಿ, ಸ್ವರೂಪದಲ್ಲಿ ಅಲ್ಲ. ಈ ಉದಾಹರಣೆ ವ್ಯಾವಹಾರಿಕ ದೃಷ್ಟಿಯಿಂದ, ದಿಂಬಿನ ಉದಾಹರಣೆ ಆಧ್ಯಾತ್ಮಿಕ ದೃಷ್ಟಿಯಿಂದ.

### ''ಭಕ್ತನ ಹೃದಯ ಭಗವಂತನ ವಾಸಸ್ಥಾನ''

ಪರಮಹಂಸರು ಮಾತು ಮುಂದುವರಿಸುತ್ತ ಹೇಳುತ್ತಿದ್ದಾರೆ:

''ಆದರೆ ಒಂದು ವಿಷಯ. ಭಕ್ತನ ಹೃದಯ ಭಗವಂತನ ವಾಸಸ್ಥಾನ. ಆತ ಸರ್ವಭೂತಗಳಲ್ಲೂ ಇರುವುದೇನೋ ನಿಜ, ಆದರೆ ಭಕ್ತನ ಹೃದಯದಲ್ಲಿ ವಿಶೇಷರೂಪದಿಂದ ಇರುತ್ತಾನೆ. ಜಮೀಂದಾರ ತನ್ನ ಎಸ್ಟೇಟಿನಲ್ಲಿ ಎಲ್ಲಿ ಬೇಕಾದರಲ್ಲಿ ಇರಬಲ್ಲ, ಆದರೆ ಆತನನ್ನು ವಿಶೇಷವಾಗಿ ಆತನ ಬೈಠಕ್‌ಖಾನೆಯಲ್ಲಿ ನೋಡಬಹುದು ಎಂಬುದಾಗಿ ಜನ ಹೇಳುತ್ತಾರೆ. ಭಕ್ತನ ಹೃದಯ ಭಗವಂತನ ಬೈಠಕ್‌ಖಾನೆ''

ಶ್ರೀರಾಮಕೃಷ್ಣರು ಹಿಂದೆ ತಮ್ಮ ದೇಹದ ಬಗ್ಗೆ ಇದೊಂದು ದಿಂಬಿನ ಚೀಲ ಎಂದು ಹೇಳಿದರಷ್ಟೆ. ಆದರೆ ಈಗ ಸೂಚಿಸುತ್ತಿದ್ದಾರೆ, ತಾವು ಅತ್ಯಂತ ಶ್ರೇಷ್ಠ ಭಕ್ತರಾದುದರಿಂದ, ತಮ್ಮ ಹೃದಯ ಭಗವದಾಲಯ ಎಂದು. ಅಷ್ಟೇ ಅಲ್ಲ, ಚೀಲದ ತುಂಬ ಬರಿ ಹತ್ತಿಯೇ ಇರುವಂತೆ, ಅವರ ಇಡೀ ವ್ಯಕ್ತಿತ್ವದಲ್ಲಿ ಭಗವಂತನೇ ತುಂಬಿಕೊಂಡಿದ್ದ. ಆದ್ದರಿಂದ ಅವರ ಚಿತ್ರವನ್ನು ಇರಿಸಿಕೊಳ್ಳುವುದೆಂದರೆ ಭಗವಂತನನ್ನೇ ಇರಿಸಿಕೊಂಡಂತೆ, ಅವರ ಚಿತ್ರವನ್ನು ನೋಡುವುದೆಂದರೆ ಭಗವಂತನನ್ನೇ ನೋಡಿದಂತೆ.

ಶ್ರೀರಾಮಕೃಷ್ಣರ ಈ ಮೇಲಿನ ಹೇಳಿಕೆ, ನಮ್ಮ ಹೃದಯದೊಳಗೆ ಭಗವಂತನನ್ನು ಕಾಣಬೇಕು ಎಂಬುದನ್ನೂ ಸೂಚಿಸುತ್ತದೆ. ಹೃದಯವೇ ಅವನನ್ನು ಸಂಧಿಸುವ ಪ್ರಶಸ್ತವಾದ ಕೇಂದ್ರ. ಆದ್ದರಿಂದ ನಮ್ಮ ಹೊರಮುಖ ಪ್ರವೃತ್ತಿಯನ್ನು ಒಳಮುಖಗೊಳಿಸಬೇಕು. ಶ್ರೀ ಅಲ್ಲಮಪ್ರಭುಗಳ ಒಂದು ವಚನವು ಇಲ್ಲಿ ಉದಾಹರಿಸಲು ಯೋಗ್ಯವಾಗಿದೆ:

**ಏನು ಕಂಡಡೇನಯ್ಯ, ತನ್ನ ಕಾಣದಾತ ಕುರುಡ.**
**ಏನು ಕೇಳಿದಡೇನಯ್ಯ, ತನ್ನ ಕೇಳದಾತ ಕಿವುಡ.**
**ಏನು ಮಾತಾಡಿದಡೇನಯ್ಯ, ತನ್ನ ಮಾತಾಡದಾತ ಮೂಕ.**
**ಏದಿಟದಿಂದ ತನ್ನ ತಾ ಕಾಣಬೇಕು, ತನ್ನ ತಾ ಕೇಳಬೇಕು ಮಾತಾಡಬೇಕು**
**ಇದೇ ತನ್ನ ನೆಲೆ, ಸ್ವಭೂಮಿ, ಸ್ವಸ್ವರೂಪ ಕಾಣಾ, ಗುಹೇಶ್ವರ**

ಈ ವಚನವನ್ನು ವ್ಯಾಖ್ಯಾನಿಸುತ್ತ ಡಾ. ಹೆಚ್.ಎಸ್. ಮುರಳೀಧರ ಹೇಳುತ್ತಾರೆ: '' ಅಂಗವಿಲ್ಲದಿರುವುದು ಅಂಗವಿಕಲತೆಯಲ್ಲ; ಅಂಗವನ್ನು ಸಾರ್ಥಕವಾಗಿ ಬಳಸದಿರುವುದು ಅಂಗವಿಕಲತೆ''

ನಾವು ಹೊರಮುಖ ಹೋಗುವುದರಿಂದ ನಮ್ಮಿಂದ ನಾವು ದೂರವಾಗುತ್ತೇವೆ. ಇದರಿಂದಾಗಿ ನಮಗೆ ನಾವೇ ಪರಕೀಯರಾಗುತ್ತೇವೆ (self-alienation), ಅಷ್ಟೇ ಅಲ್ಲದೆ ದೇವರೂ ಪರಕೀಯನಾಗುತ್ತಾನೆ. ಏಕೆಂದರೆ ದೇವರು ನಮ್ಮೊಳಗೇ ಇರುವುದು ತಾನೆ? ತನ್ನನ್ನು ತಾನು ಪಡೆದರೆ ದೇವರನ್ನು ಅರಿತಂತಾಗುತ್ತದೆ; ದೇವರನ್ನು ಅರಿತರೆ ತನ್ನನ್ನು ಪಡೆದಂತಾಗುತ್ತದೆ. ''ಎಲೆಯೊಂದು ಮರವನ್ನು ಅರಿಯುವಾಗ ತನ್ನನ್ನೂ ಅರಿಯುತ್ತದೆ.'' ಭಗವಂತನನ್ನು ಅರಿಯುವುದರ ಮೂಲಕ ತನ್ನನ್ನು ಅರಿಯುವುದು (ಭಕ್ತಿಮಾರ್ಗ); ತನ್ನನ್ನು ಅರಿಯುವುದರ ಮೂಲಕ ಭಗವಂತನನ್ನು ಅರಿಯುವುದು (ಜ್ಞಾನಮಾರ್ಗ).

### ಬ್ರಹ್ಮಸತ್ಯ, ಜಗನ್ಮಿಥ್ಯಾ

ಶ್ರೀರಾಮಕೃಷ್ಣರು: ''ಜ್ಞಾನಿಗಳು ಯಾರನ್ನು ಬ್ರಹ್ಮ ಎಂದು ಕರೆಯುತ್ತಾರೊ, ಆತನನ್ನೇ ಯೋಗಿಗಳು ಆತ್ಮ ಎಂದು ಕರೆಯುತ್ತಾರೆ; ಭಕ್ತರು ಭಗವಂತ ಅಂತ ಕರೆಯುತ್ತಾರೆ. ಒಬ್ಬನೇ ಬ್ರಾಹ್ಮಣನಿಗೆ ಪೂಜೆ ಮಾಡುವಾಗ ಪೂಜಾರಿ ಎಂದು ಹೆಸರು; ಅಡಿಗೆ ಮಾಡುವಾಗ ಅಡಿಗೆ ಮಾಡುವವನು ಅಂತ ಹೆಸರು; ಜ್ಞಾನಯೋಗಿ ಜ್ಞಾನಮಾರ್ಗ ನಿಷ್ಠನಾಗಿ ಸರ್ವದಾ 'ನೇತಿ, ನೇತಿ' ಎಂಬ ವಿಚಾರದಲ್ಲಿ, ಅಂದರೆ 'ಬ್ರಹ್ಮ ಇದಲ್ಲ ಅದಲ್ಲ, ಜೀವವಲ್ಲ, ಜಗತ್ತಲ್ಲ' ಎಂದು ವಿಚಾರದಲ್ಲಿ ತೊಡಗಿರುತ್ತಾರೆ. ಈ ರೀತಿಯಾಗಿ ವಿಚಾರ ಮಾಡುಮಾಡುತ್ತ ಮುಂದುವರಿದರೆ ಮನಸ್ಸು ಸ್ಥಿರವಾಗುತ್ತದೆ. ಬಳಿಕ ಮನಸ್ಸು ಲಯಹೊಂದುತ್ತದೆ, ಸಮಾಧಿಯುಂಟಾಗುತ್ತದೆ; ಆಗ ಬ್ರಹ್ಮಜ್ಞಾನ ದೊರೆಯುತ್ತದೆ. ಬ್ರಹ್ಮಜ್ಞಾನಿಯ ನಿಶ್ಚಿತಾಭಿಪ್ರಾಯ ಬ್ರಹ್ಮಸತ್ಯ, ಜಗನ್ಮಿಥ್ಯಾ. ಈ ನಾಮರೂಪಗಳೆಲ್ಲವೂ ಸ್ವಪ್ನದ ಹಾಗೆ ಮಿಥ್ಯಾ, ಬ್ರಹ್ಮ ಏನು ಎಂಬುದನ್ನು ಬಾಯಿ ಮೂಲಕ ವರ್ಣಿಸಲಾಗುವುದಿಲ್ಲ. ಆತನನ್ನು ಒಬ್ಬ ವ್ಯಕ್ತಿ ಎಂತಲೂ ಹೇಳಲಾಗುವುದಿಲ್ಲ ಹೀಗೆಂದು ಜ್ಞಾನಿಗಳು–ವೇದಾಂತವಾದಿಗಳು ಹೇಳುತ್ತಾರೆ.''

ಅಸತ್ಯ ಮತು ಮಿಥ್ಯೆ ಇವೆರಡು ಪದಗಳಿಗೂ ಅರ್ಥ ವ್ಯತ್ಯಾಸ ವಿದೆ-ವೇದಾಂತದ ದೃಷ್ಟಿಯಿಂದ. ಅಸತ್ಯವೆಂದರೆ ಸಂಪೂರ್ಣ ಇಲ್ಲದಿರುವುದು- ಇದು ನಮ್ಮ ಅರಿವಿಗೇ ಬರಲಾರದು, ಅದರ ಬಗ್ಗೆ ಯಾವ ಕಲ್ಪನೆಯೂ ನಮ್ಮ ಮನಸ್ಸಿನಲ್ಲಿ ಇರಲಾರದು, ಮತ್ತು ಅದರ ಬಗ್ಗೆ ಮಾತೇ ಇರುವುದಿಲ್ಲ. ಹಾಗಾಗಿ ಅದ ಕ್ಕೊಂದು ಉದಾಹರಣೆಯನ್ನೂ ಕೊಡಲಾಗುವುದಿಲ್ಲ. ಆದರೆ ಮಿಥ್ಯೆ ಎಂದರೆ ಅದು ನಮ್ಮ ಅರಿವಿಗೆ ಬರುತ್ತದೆ, ಇಂದ್ರಿಯ ಗೋಚರವೂ ಆಗಬಹುದು, ಆದರೆ ನಿಜವಾಗಿ ಇರುವುದಿಲ್ಲ. ಉದಾಹರಣೆಗೆ, ಹಗ್ಗದಲ್ಲಿ ಹಾವನ್ನು ಕಾಣುವುದು. ಅಲ್ಲಿ ಹಾವು ಇಲ್ಲದಿದ್ದರೂ ನಾವು ಹಾವನ್ನು ನೋಡುತ್ತಿರುವುದಂತೂ ನಿಜ. ಇಲ್ಲಿ ಹಾವಿನ ಅನುಭವಕ್ಕೆ ಹಗ್ಗದ ಆಶ್ರಯವಿದೆ. ವಸ್ತುವಿನ ಅಯಥಾರ್ಥ ಜ್ಞಾನವನ್ನೆ ಮಿಥ್ಯೆ ಎಂದು ಕರೆಯಬಹುದು. ನಾವು ಪರಬ್ರಹ್ಮ ವಸ್ತುವನ್ನು ಜಗದ್ರೂಪದಲ್ಲಿ ಕಾಣುತ್ತಿದ್ದೇವೆ. ಈ ದೃಷ್ಟಿಯಿಂದ ಈ ಜಗತ್ತು ಮಿಥ್ಯೆ. ಹಿಂದಿರುವ ವಸ್ತುವು ಕಾಣ ದಿರುವುದು ಅವಿದ್ಯೆ, ಹಾಗೆ ಆ ಜಾಗದಲ್ಲಿ ಇನ್ನೊಂದು ವಸ್ತು ಕಾಣುವುದು ವಿಪರ್ಯಯ. ಉದಾಹರಣೆಗೆ, ವ್ಯಕ್ತಿಯೊಬ್ಬನು ಹೇಳಿದ ಮಾತನ್ನು ತಪ್ಪಾಗಿ ಗ್ರಹಿಸಿ, ಅಪಾರ್ಥವನ್ನು ಕಲ್ಪಿಸು ವುದರ ಮೂಲಕ ಉಂಟಾಗುವ ಗೊಂದಲಗಳು ಅನೇಕ. ಪರ ಬ್ರಹ್ಮನನ್ನು ಜಗತ್ತಾಗಿ ನೋಡುವುದು ಒಂದು ಭ್ರಮೆ, ಅದ ರೊಳಗೆ ಇನ್ನೂ ಅನೇಕ ಭ್ರಮೆಗಳನ್ನು ಸೃಷ್ಟಿಸಿಕೊಂಡು ನಾವೊಂದು ಭ್ರಮಾತ್ಮಕ ಲೋಕದಲ್ಲಿ ವಾಸಿಸುತ್ತಿದ್ದೇವೆ.

ಮಡಕೆಗೆ ಉಪಯುಕ್ತತೆ ಇದೆ. ಬರಿಯ ಮಣ್ಣಿನಿಂದ ನೀರ ನ್ನು ತರಲಾಗುವುದಿಲ್ಲ. ಮಡಕೆ ಒಂದು ಮಿಥ್ಯೆ, ಅಸತ್ಯವಿಲ್ಲ. ಆದರೆ ಅದಕ್ಕೆ ಮಣ್ಣಿಗಿಂತ ಪ್ರತ್ಯೇಕವಾದ ಅಸ್ತಿತ್ವ ಇಲ್ಲದಿರು ವುದರಿಂದ ಅದು ಸತ್ಯವೂ ಅಲ್ಲ. ಇದು ಜ್ಞಾನಿಯ ದೃಷ್ಟಿ.

### ಭಕ್ತನ ದೃಷ್ಟಿ

ಶ್ರೀರಾಮಕೃಷ್ಣರು: ''ಆದರೆ ಭಕ್ತರು ಎಲ್ಲ ಅವಸ್ಥೆಗಳನ್ನೂ ಸ್ವೀಕರಿಸುತ್ತಾರೆ. ಜಾಗೃತ್ ಅವಸ್ಥೆ ಕೂಡ ಸತ್ಯ ಅಂತ ಹೇಳುತ್ತಾರೆ. ಅವರು ಜಗತ್ ಸ್ವಪ್ನವತ್ ಅಂತ ಹೇಳುವುದಿಲ್ಲ. ಹೇಳುತ್ತಾರೆ, ಈ ಜಗತ್ತು ಭಗವಂತನ ಐಶ್ವರ್ಯ ಎಂದು. ಆಕಾಶ, ನಕ್ಷತ್ರ, ಚಂದ್ರ, ಸೂರ್ಯ, ಪರ್ವತ, ಸಮುದ್ರ, ಜೀವ, ಜಂತು ಎಲ್ಲ ವನ್ನೂ ಭಗವಂತ ಸೃಷ್ಟಿಸಿದ್ದಾನೆ. ಇವೆಲ್ಲವೂ ಆತನ ಐಶ್ವರ್ಯ ವೇ. ಆತ ನಮ್ಮ ಅಂತರ್ಯದಲ್ಲಿ , ಹೃದಯಮಧ್ಯದಲ್ಲಿ ಇದ್ದಾನೆ. ಮತ್ತೆ ಹೊರಗೂ ಇದ್ದಾನೆ. ಉತ್ತಮ ಭಕ್ತ ಹೇಳುತ್ತಾನೆ, ಆತನೇ ಈ ಚತುರ್ವಿಂಶತಿ ತತ್ತ್ವ-ಜೀವ ಜಗತ್ತು ಆಗಿದ್ದಾನೆ. ಭಕ್ತನ ಇಚ್ಛೆ ಸಕ್ಕರೆ ತಿನ್ನಬೇಕು ಅಂತಲೇ ವಿನಾ ಸಕ್ಕರೆ ಆಗಬೇಕು ಅಂತಲ್ಲ.''

'ಭಗ' ಎಂಬ ಆರು ಗುಣಗಳಿಂದ ಕೂಡಿದವನೇ ಭಗವಂತ. ಅವು ಯಾವುವು?

**ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥**

*(ವಿಷ್ಣುಪುರಾಣ, ೬.೫.೭೪)*

''ಐಶ್ವರ್ಯ, ವೀರ್ಯ, ಯಶಸ್ಸು, ಸಂಪತ್ತು, ಜ್ಞಾನ ಮತ್ತು ವೈರಾಗ್ಯ— ಈ ಆರನ್ನೇ 'ಭಗ' ಎಂದು ಕರೆಯುವುದು.''

ಶ್ರೀರಾಮಕೃಷ್ಣರ ಈ ಮೇಲಿನ ವಿವರಣೆ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಹೆಚ್ಚು ಹತ್ತಿರದಲ್ಲಿದೆ. ಆ ಸಿದ್ಧಾಂತದ ಪ್ರಕಾರ, ಜೀವ ಮತ್ತು ಜಗತ್ತು (ಚಿತ್-ಅಚಿತ್) ಭಗವಂತನ ಅವಿಭಾಜ್ಯ ಅಂಶ ಗಳು, ಮತ್ತು ಅವನು ಅಂಶಿ. ಇವು ಅವನ ವಿಶಿಷ್ಟ ಗುಣಗಳು, ಅನಂತವಾದ ಅವನೊಂದಿಗೆ ಯಾವಾಗಲೂ ಸಂಬದ್ಧವಾಗಿರು ತ್ತದೆ. ಪ್ರಲಯಕಾಲದಲ್ಲಿ ಅವನೊಳಗೆ ಸುಪ್ತವಾಗಿದ್ದು, ಸೃಷ್ಟಿ ಕಾಲದಲ್ಲಿ ಅವನಲ್ಲಿ ವ್ಯಕ್ತವಾಗುತ್ತವೆ. ಹೀಗಾಗಿ ಇಡೀ ವಿಶ್ವ ಪರ ಸ್ಪರ ಸಂಬಂಧವುಳ್ಳದ್ದು, ಯಾವುದನ್ನೂ ಯಾವುದರಿಂದಲೂ ಪ್ರತ್ಯೇಕಿಸಲಾಗುವುದಿಲ್ಲ. ಟಿಚ್ ನ್ಹಾಟ್ ಹನ್ ಎಂಬ ಬೌದ್ಧ ಅನು ಭಾವಿ ಹೇಳುವಂತೆ, ಮರದಿಂದ ಕೆಳಗೆ ಬೀಳುತ್ತಿರುವ ಎಲೆ ಯನ್ನು, ''ನೀನು ಮರದಿಂದ ಪ್ರತ್ಯೇಕವಾಗುತ್ತಿದ್ದೀಯ, ಬೇಸ ರವೆ?'' ಎಂದು ಕೇಳಿದರೆ, ಅದು ಹೇಳುತ್ತದೆ, ''ಇಲ್ಲ , ನಾನು ಮಣ್ಣಿನೊಡನೆ ಒಂದಾಗಿ, ಗೊಬ್ಬರವಾಗಿ ಮತ್ತೆ ಮರವನ್ನೇ ಸೇರುತ್ತೇನೆ.'' ಅವರು ಹೇಳುತ್ತಾರೆ, ''ಸುಂದರವಾದ ಹೂವು ನಾಳೆ ಕೊಳೆತು ಗೊಬ್ಬರವಾಗಿ, ಗಿಡವನ್ನು ಸೇರಿ, ಮತ್ತೆ ಸುಂದರ ಹೂವಾಗಿ ಅರಳುತ್ತದೆ.''

### ವೈಯಕ್ತಿಕತೆ ಒಂದು ಭ್ರಮೆ

ಭೌತಿಕವಾಗಿ ನಾವೆಲ್ಲರೂ ಪ್ರತ್ಯೇಕವೆಂದು ಕಂಡುಬಂದರೂ ನಮ್ಮ ವಿವಿಧ ದೇಹಗಳು ಅನಂತ ಭೌತಸಾಗರದ (Ocean of matters) ಕಿರು ಅಲೆಗಳು. ಭೌತಸಾಗರದ ಅವಿಭಾಜ್ಯ ಅಂಗ ಗಳು. ಇನ್ನೂ ಮುಂದುವರಿದರೆ ನಮ್ಮೆಲ್ಲರ ಜೀವಾತ್ಮಗಳು (individual souls) ವಿಶ್ವಾತ್ಮನ (ಈಶ್ವರನ) ಅವಿಭಾಜ್ಯ ಅಂಶ ಗಳು. ಹೀಗಾಗಿ ಈ ಮೂರೂ ಹಂತಗಳಲ್ಲಿಯೂ ಕೂಡ ನಮಗೆ ವೈಯಕ್ತಿಕತೆ (induviduality) ಎಂಬುದಿಲ್ಲ. ಇದೆಯೆಂಬ ಭ್ರಮೆಯ ಆಧಾರದ ಮೇಲೆಯೇ ಜಗತ್ತು ನಡೆದುಕೊಂಡು ಹೋಗುತ್ತಿದೆ. ಉಪನಿಷತ್ತಿನ ಮಹಾವಾಕ್ಯವಾದ 'ತತ್ತ್ವಮಸಿ' ಎಂಬುದು ನಮ್ಮ ವ್ಯಕ್ತಿತ್ವದ ಮೂರೂ ಹಂತಗಳಿಗೆ ಅನ್ವಯಿಸು ತ್ತದೆ. ಆದರೆ ದುರದೃಷ್ಟವೇನೆಂದರೆ ನಾವು ಜಗತ್ತನ್ನು ಭ್ರಮೆ ಯೆಂದು ಭಾವಿಸುತ್ತೇವೆಯೇ ಹೊರತು, ನಮ್ಮ ವ್ಯಕ್ತಿಭಾವವನ್ನು ಭ್ರಮೆಯೆಂದು ಭಾವಿಸುವುದಿಲ್ಲ — ಈ ವ್ಯಕ್ತಿಭಾವದಿಂದಲೇ '**ನಮ್ಮ**' ಜಗತ್ತು ನಿರ್ಮಿತವಾಗಿದ್ದರೂ! ಈ ವ್ಯಕ್ತಿಭಾವದಿಂದಲೇ ಅಹಂಕಾರವು ಉದಿಸುತ್ತದೆ, ಮತ್ತು ಇದರ ಪರಿಣಾಮವಾಗಿ ನಾವು ಎಲ್ಲರಿಂದಲೂ ಮತ್ತು ಎಲ್ಲದರಿಂದಲೂ ನಮ್ಮನ್ನು ಪ್ರತ್ಯೇ

ಕಿಸಿಕೊಳ್ಳುತ್ತೇವೆ, ಹಾಗೂ ಅದಕ್ಕನುಗುಣವಾದ ಅನೇಕ ಭಾವ ವಿಕಾರಗಳಿಗೆ ವಶರಾಗುತ್ತೇವೆ. ಪರಸ್ಪರ ಸಂಪರ್ಕ, ಪರಸ್ಪರ ಸಂಬಂಧ, ಪರಸ್ಪರಾವಲಂಬನೆ ಇವುಗಳಿಂದ ಕೂಡಿದ ಈ ಜಗತ್ತಿನಲ್ಲಿ ಇತರರಿಗೆ ಹಾನಿ ಮಾಡಿದರೆ ತನಗೆ ಹಾನಿಮಾಡಿ ಕೊಂಡಂತೆ ಎಂಬುದನ್ನು ಬುದ್ಧಿಪೂರ್ವಕವಾಗಿ ಮಾತ್ರವಲ್ಲದೆ ಹೃತ್ಪೂರ್ವಕವಾಗಿಯೂ ಅರಿತು ಬಾಳುವ ವಿವೇಕಬುದ್ಧಿ ಮನುಷ್ಯ ರೆನಿಸಿಕೊಂಡ ನಮಗೆಲ್ಲರಿಗೂ ಇರಬೇಕಾದುದೇ ಸಮಾಜದ ಸುಸ್ಥಿತಿಗೆ ಅತ್ಯಂತ ಆವಶ್ಯಕ.

ಸಕ್ಕರೆಯನ್ನು ತಿಂದಾಗ, ಸವಿದಾಗ ಅದು ದೇಹದೊಡನೆ ಒಂದಾಗುತ್ತದೆ. ಹಾಗೆಯೇ ಭಕ್ತರು ಭಗವದಾನಂದವನ್ನು ಅನು ಭವಿಸುತ್ತ ಅದೇ ಆಗಿಬಿಡುತ್ತಾರೆ.

### ಶರಣಾಗತಿ

ಶ್ರೀರಾಮಕೃಷ್ಣರು: ''ಭಕ್ತನ ಭಾವ ಯಾವ ರೀತಿಯದು ಗೊತ್ತೆ? ಆತನ ಭಾವ: 'ಹೇ ಭಗವಂತ, ನೀನು ಪ್ರಭು, ನಾನು ನಿನ್ನ ದಾಸ; ನೀನು ತಾಯಿ, ನಾನು ನಿನ್ನ ಮಗು' ಎಂಬುದಾಗಿ. ಮತ್ತೆ: 'ನೀನು ನನ್ನ ತಾಯಿ, ತಂದೆ, ನೀನು ಪೂರ್ಣ, ನಾನು ಅಂಶ' ಎಂಬುದಾಗಿ. ಭಕ್ತ 'ನಾನೇ ಬ್ರಹ್ಮ' ಎಂಬುದಾಗಿ ಹೇಳಲು ಎಂದಿಗೂ ಇಚ್ಛೆಪಡುವುದಿಲ್ಲ.''

ಇಲ್ಲಿ ಶ್ರೀರಾಮಕೃಷ್ಣರು ಶರಣಾಗತಿಯ ಭಾವವನ್ನು ವ್ಯಕ್ತ ಪಡಿಸುತ್ತಿದ್ದಾರೆ. ಶರಣಾಗತಿಯ ಮುಖ್ಯ ಲಕ್ಷಣ ''**ಅನ್ಯಾಶ್ರ ಯಾಣಾಂ ತ್ಯಾಗಃ**''- ಅಂದರೆ ಭಗವಂತನೊಬ್ಬನನ್ನು ಬಿಟ್ಟು ಬೇರೆಲ್ಲ ಆಶ್ರಯಗಳನ್ನೂ ಬಿಟ್ಟುಬಿಡುವುದು. ನಾವು ಬೇರೆ ಯಾವ ಆಶ್ರಯವೂ ಇಲ್ಲದಾಗ ದೇವರನ್ನು ಆಶ್ರಯಿಸಲು ಪ್ರಯತ್ನಿಸುತ್ತೇವೆ. ಸ್ವಾಮಿ ಯತೀಶ್ವರಾನಂದರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಹಾಸ್ಯಪ್ರಸಂಗವನ್ನು ಹೇಳುತ್ತಾರೆ: ಇಬ್ಬರು ಸ್ನೇಹಿತರು ಹಡಗಿನಲ್ಲಿ ಪ್ರಯಾಣಿಸುತ್ತಿದ್ದರು. ಅದು ಬಿರುಗಾಳಿಗೆ ಸಿಕ್ಕಿ ಮುಳುಗುವ ಪರಿಸ್ಥಿತಿಯಿತ್ತು. ಅವರಲ್ಲಿ ಪರಮ ಭಾಗವತನಾದ ಒಬ್ಬನು ಬೇರೆ ಗತಿಕಾಣದೆ ದೇವರನ್ನು ರಕ್ಷಿಸೆಂದು ಪ್ರಾರ್ಥಿಸತೊಡಗಿದನು. ಸ್ವಲ್ಪ ಹೊತ್ತಿನಲ್ಲಿ ಇನ್ನೊ ಬ್ಬನು ಹೇಳಿದನು: ''ಏ, ಸುಮ್ಮನಿರು, ನೀನು ಅಷ್ಟುದೂರ ಹೋಗಬೇಕಾಗಿಲ್ಲ. ದೂರದಲ್ಲಿ ಇನ್ನೊಂದು ಹಡಗು ಬರು ತ್ತಿರುವುದು ಕಾಣಿಸುತ್ತಿದೆ.''

ಭೌತಿಕವಾಗಿ ಭಕ್ತನು ದೇವರನ್ನೇ ಆಶ್ರಯಿಸುತ್ತಾನೆ-ಅನ್ನ, ಬಟ್ಟೆ, ಮುಂತಾದ ಮೂಲಭೂತ ಆವಶ್ಯಕತೆಗಳಿಗೆ ಯಾವ ಕೊರತೆಯೂ ಆಗದಂತೆ ದೇವರು ನೋಡಿಕೊಳ್ಳುತ್ತಾನೆ. ಮಾನ ಸಿಕವಾಗಿ ಅವನು ಭಗವಂತನನ್ನೇ ಚಿಂತಿಸುತ್ತಾನೆ – ಅವನ ಮನಸ್ಸು ಬೇರೆ ಜ್ಞಾನವನ್ನು ಆಶ್ರಯಿಸುವುದಿಲ್ಲ. ಧ್ಯಾನವನ್ನು ಅಳೆಯುವಾಗ ಒಬ್ಬನು ಧ್ಯಾನವನ್ನು ತಳ್ಳಿಕೊಡುವಂತೆ, ದೇವರೇ ಎಲ್ಲ ಜ್ಞಾನವನ್ನೂ ಒದಗಿಸುತ್ತಾನೆ. ಅವನ ಪಾಲಿಗೆ ಎಲ್ಲ ಜ್ಞಾನವೂ ಭಗವದ್ ಜ್ಞಾನವೇ – ಭಗವತ್ ಚೈತನ್ಯವೇ ವಿವಿಧ ಜ್ಞಾನರೂಪದಲ್ಲಿ ವ್ಯಕ್ತವಾಗುತ್ತಿರುವುದು. ಅಂದರೆ ಬೇರೆಯವರ ಪ್ರೀತಿ, ಸಹಾನುಭೂತಿ, ಪ್ರಶಂಸೆ, ಮಾನ್ಯತೆ ಇತ್ಯಾದಿಗಳನ್ನು ಬಯಸದೆ ಇರುವುದು. ಅವನು ಶಾಂತಿ ಸಮಾಧಾನಗಳಿಗಾಗಿ ದೇವರನ್ನೇ ಆಶ್ರಯಿಸುತ್ತಾನೆ. ಅವನು ಅಹಂಕಾರವನ್ನೂ ದೇವ ರಿಗೇ ಅರ್ಪಿಸುತ್ತಾನೆ, ಅವನ ಆಧ್ಯಾತ್ಮಿಕ ಯೋಗಕ್ಷೇಮವನ್ನೂ ದೇವರೇ ನೋಡಿಕೊಳ್ಳುತ್ತಾನೆ. ಈ ವಿಷಯದಲ್ಲಿ ಅತ್ಯಂತ ಉತ್ತಮ ಉದಾಹರಣೆಯೆಂದರೆ ಗಿರೀಶ್‌ಚಂದ್ರ ಘೋಷ್. *(ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ನೋಡಿ.)*

*(ಮುಂದುವರಿಯುವುದು)*

## ಕಳ್ಳ ಹಾಗೂ ಸಂತ

ಒಂದು ಅಮಾವಾಸ್ಯೆಯ ರಾತ್ರಿಯಂದು ಸಂತರೊಬ್ಬರು ಮನೆಯಲ್ಲಿ ನಿದ್ರೆ ಮಾಡುತ್ತಿರುವಾಗ ಒಬ್ಬ ಕಳ್ಳ ತೊಂದರೆ ಇಲ್ಲದೆ ಮನೆ ಪ್ರವೇಶ ಮಾಡಿದ. ಮನೆಯಲ್ಲಾ ತಡಕಾಡಿ ದರೂ ಕಳ್ಳನಿಗೆ ಯಾವುದೇ ಬೆಲೆ ಬಾಳುವ ವಸ್ತು ಕಾಣದೆ ಕಂಗಾ ಲಾಗಿ, ಅಡುಗೆ ಮನೆಯಲ್ಲಿ ಸಿಕ್ಕ ಧಾನ್ಯ, ಬಟ್ಟೆ, ಪಾತ್ರೆಗಳನ್ನು ಗಂಟು ಕಟ್ಟಿ, ಸಿಕ್ಕಷ್ಟೇ ಶಿವ ಎಂದುಕೊಂಡು ಮುಂಬಾಗಿಲಿನಿಂದ ಹೊರಕ್ಕೆ ಹೊರಟ. ಆದರೆ, ಬಾಗಿಲಿನ ಹತ್ತಿರ ಅಡ್ಡವಾಗಿ ನಿಂತ ದೈತ್ಯಾಕಾರದ ವ್ಯಕ್ತಿಯನ್ನು ಕಂಡು ಕಳ್ಳನು ಹೆದರಿ ಅವನನ್ನೇ ನೋಡುತ್ತಿರುವಾಗ ಆ ದೈತ್ಯಾಕಾರದ ವ್ಯಕ್ತಿ ಕಳ್ಳನನ್ನು ಹೊರ ಹೋಗ ದಂತೆ ತಡೆದ. ಕಳ್ಳ ಹಿಂಬಾಗಿಲಿಗೆ ಓಡಿದ. ಅಲ್ಲಿಯೂ ಬಿಲ್ಲು ಹಿಡಿದ ಆ ವ್ಯಕ್ತಿಯಿಂದ ತಡೆಯಲ್ಪಟ್ಟು, ಮುಂದಿನ ಅಥವಾ ಹಿಂದಿನ ಬಾಗಿಲುಗಳಿಂದ ಹಲವು ಸಲ ಹೊರಹೋಗಲು ಮಾಡಿದ ಪ್ರಯತ್ನಗಳು ವ್ಯರ್ಥ ಪ್ರಯತ್ನವಾಯಿತು. ಆಗ ಕಳ್ಳನು ಅನ್ಯಮಾರ್ಗವನ್ನು ಕಾಣದೆ ಮನೆಯಲ್ಲಿ ಮಲಗಿದ್ದ ಸಂತನನ್ನೇ ಎಚ್ಚರಿಸಿ, ತಾನು ಮಾಡಿದ ತಪ್ಪಿಗಾಗಿ ಕ್ಷಮೆ ಕೇಳಿ, ಆ ದೈತ್ಯಾಕಾರದ ವ್ಯಕ್ತಿ ತನ್ನನ್ನು ಹೊರಹೋಗದಂತೆ ಕಳ್ಳನನ್ನು ಹಾಗೆ ಹೊರಹೋಗದಂತೆ ನಿರ್ಬಂಧಿಸಿದ್ದನ್ನು ವಿವರಿಸಿದ. ಯಾರು ತಡೆದವರು ಎನ್ನುವುದು ಆ ಸಂತರಿಗೆ ತಿಳಿದು, ಅವರು ಕಳ್ಳನಿಗೆ ನಮಸ್ಕರಿಸುತ್ತಾ, ''ಶ್ರೀರಾಮನೇ ನಿನ್ನನ್ನು ತಡೆದ ವ್ಯಕ್ತಿ. ಆ ದೇವನನ್ನು ಕಂಡ ನೀನೇ ಧನ್ಯ'' ಎಂದು ತಿಳಿಸಿದರು. ಆ ಸಂತನು ಯಾರು ನಿಮಗೆ ತಿಳಿದಿದೆಯೆ? ಹೌದು, ಅವರು ಸಂತ ತುಳಸಿದಾಸರು.

*(ಡಿ. ಪಾಂಡುರಂಗ ಭಟ್ ಅವರ 'ಪೌರಾಣಿಕ ಕಥೆಗಳು' ಗ್ರಂಥ ದಿಂದ, ಮೈಸೂರು ಆಶ್ರಮದ ಪ್ರಕಟಣೆ)*